ಇ) ೩ ಗ್ರಾಮಗಳಲ್ಲಿ ಪ್ರಾರಂಭವಾಗಿದೆ.

ಈ) ಪರಿಶೀಲಿಸಿ ಕ್ರಮಕ್ಕೈಗೊಳ್ಳಲಾಗುವುದು.

ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿರುವ ಸ್ವಇಚ್ಛೆಯಿಂದ ನಿವೃತ್ತಿ ಹೊಂದುವ ಸೌಲಭ್ಯವನ್ನು ಅನುದಾನ ಪಡೆಯುತ್ತಿರುವ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಒದಗಿಸುವುದು

೨೩೪ (೬೮೨) ಶ್ರೀ ಆರ್.ಟಿ. ದೇಸಾಯಿ (ಬಾದಾಮಿ). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಸರ್ಕಾರದ ಶಿಕ್ಷಣ ಸಂಸ್ಥೆಗಳಲ್ಲಿನ ಶಿಕ್ಷಕರು ೨೦ ವರ್ಷಗಳ ಅರ್ಹ ಸೇವೆ ಸಲ್ಲಿಸಿ ೧೯೭೫ನೇ ಇಸವಿಯ ನವೆಂಬರ್ ೩೦ ಹಾಗೂ ಡಿಸೆಂಬರ್ ೭ನೇ ದಿನಾಂಕ ಎಫ್‌ಡಿ ೨೫ ಎಸ್.ಆರ್.ಎಸ್. ೭೮ನೇ ಕ್ರಮ ಸಂಖ್ಯೆಯ ಸರಕಾರಿ ಆದೇಶದ ಮೇರೆಗೆ ಸ್ವಇಚ್ಛೆಯಿಂದ ನಿವೃತ್ತಿ ಹೊಂದಬಹುದಾದ ಸೌಲಭ್ಯವನ್ನು (ಜನವರಿ ೧ನೇ ದಿನಾಂಕದಿಂದ ಇಡಿ ೪೭ ಎಸ್.ಬಿ.ಎಸ್. ೮೧ನೇ ಕ್ರಮ ಸಂಖ್ಯೆಯ ಸರಕಾರಿ ಆದೇಶದ ಮೇರೆಗೆ) ಅನುದಾನ ಪಡೆಯುತ್ತಿರುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ವಿಸ್ತರಿಸುವ ಯೋಜನೆ ಸರಕಾರದವರ ಮುಂದಿದೆಯೇ ?

ಆ) ಹಾಗಿದ್ದಲ್ಲಿ, ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗೂ ಸ್ವಇಚ್ಛೆಯಿಂದ ನಿವೃತ್ತಿಹೊಂದ ಬಯಸುವ ಶಿಕ್ಷಕರಿಗೆ ೫ ವರ್ಷಗಳ ಸೇವಾವಧಿಯ ಹೆಚ್ಚಿನ ಸೌಲಭ್ಯವನ್ನು ಅನ್ವಯಿಸುವಂತೆ ಮಾಡಲಾಗುವುದೇ ?

ಇ) ಸದರಿ ಶಿಕ್ಷಕರಿಗೆ ಈ ಸೌಲಭ್ಯಗಳನ್ನು ಕೂಡಲೇ ಸರಕಾರದವರು ಪರಿಶೀಲಿಸುವರೇ ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಸರ್ಕಾರಿ ಆದೇಶ ಸಂಖ್ಯೆ ಇಡಿ ೪೭ ಎಸ್.ಬಿ.ಎಸ್. ೮೧ ದಿನಾಂಕ ೧೬-೧-೮೫ ಇದರಲ್ಲಿ ಟಿ.ಬಿ.ಎಸ್. ಸೌಲಭ್ಯ ಪಡೆಯುವ ಖಾಸಗಿ ಶಿಕ್ಷಣ ಸಂಸ್ಥೆಯ ನೌಕರರಿಗೆ ಸ್ವಯಂ ನಿವೃತ್ತಿ ಸೌಲಭ್ಯವನ್ನು ವಿಸ್ತರಿಸಲಾಗಿದೆ. (೫ ವರ್ಷಗಳ ವೈಟೇಜ್ ಸೌಲಭ್ಯ ಬಿಟ್ಟು)

ಆ) ಟಿ.ಬಿ.ಎಸ್. ನೌಕರರ ನಿವೃತ್ತಿ ವೇತನ ಮತ್ತು ಶಾಲಾ ಮಂಡಳಿಯ ಪಂಶಿಗೆ ಇವುಗಳು ಒಂದನ್ನೊಂದು ಅವಲಂಬಿಸಿರುವುದರಿಂದ ೫ ವರ್ಷಗಳ ವೈಟೇಜ್ ಕೊಡಲಾಗುವುದಿಲ್ಲ.

ಇ) (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಒಂದೇ ತಾಲ್ಲೂಕಿನಲ್ಲಿ ಇಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿ ಕೆಲಸ ಮಾಡಿರುವ ಶಿಕ್ಷಕರನ್ನು ವರ್ಗಾಯಿಸುವುದು

೨೩೯ (೭೧೦) ಶ್ರೀ ಆರ್.ಎನ್. ನಾಯ್ಕ (ಭಟ್ಕಳ್). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಒಂದೇ ತಾಲ್ಲೂಕಿನಲ್ಲಿ ೨೦ ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ಶಿಕ್ಷಕರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಆ) ಹಾಗಿದ್ದಲ್ಲಿ ೨೦ ವರ್ಷಕ್ಕಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ಶಿಕ್ಷಕರನ್ನು ವರ್ಗಾಯಿಸಲು ಕ್ರಮ ಕೈಕೊಳ್ಳಲಾಗಿದೆಯೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೨೨,೭೫೧ (ತಾಲ್ಲೂಕುವಾರು ಮಾಹಿತಿ ಪಟ್ಟಿಯನ್ನು ಲಗತ್ತಿಸಿದೆ).